<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>
<u>ಹೊಸದುರ್ಗ</u>

ಓ.ಎಸ್.**1/2018**
ಡಿ.ಡಬ್ಲೂ. **1**

ದಿನಾಂಕ..**25/07/2022.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ..ಎಸ್,ಎಂ ..., ವಕೀಲರಿಂದ ವಾದಿಯ ಪರವಾಗಿ:</u>

1. ನನ್ನ ಅಜ್ಜನ ಹೆಸರು ರುದ್ರಪ್ಪ ಎನ್ನುವುದು ಸರಿ. ನನ್ನ ಅಜ್ಜ ರುದ್ರಪ್ಪನಿಗೆ 3 ಜನ ಮಕ್ಕಳು ಎಂದರೆ ಸರಿ. ಸದರಿಯವರು ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ ಎನ್ನುವುದು ಸರಿ. ಸಿದ್ದಪ್ಪನಿಗೆ ಪರಣ್ಣ, ಶಿವಣ್ಣ ಮರುಳ ಸಿದ್ದಪ್ಪ ಮತ್ತು ಚಂದ್ರಣ್ಣ ಎಂಬ 4 ಜನ ಮಕ್ಕಳು ಎಂದರೆ ಸರಿ. ಪರಣ್ಣನಿಗೆ ಗಂಗಾಧರಪ್ಪ ,ಶಿ ವರುದ್ರಪ್ಪ, ಶೇಖರಪ್ಪ , ಮಹೇಶ್ವರಪ್ಪ ಮತ್ತು ಪ್ರಕಾಶ್ ಎಂಬ 5 ಜನ ಮಕ್ಕಳು ಎಂದರೆ ಸರಿ. ಮಲ್ಲಪ್ಪನಿಗೆ ನಾನು ಒಬ್ಬನೆ ಮಗ ಎಂದರೆ ಸರಿ.

2. ಸರ್ವೇ ನಂ. 38 ನ್ನು ನನ್ನ ಮುತ್ತಜ್ಜ ರುದ್ರಪ್ಪ ಖರೀದಿಸಿರುತ್ತಾರೆ. ನನ್ನ ಮುತ್ತಜ್ಜ ರುದ್ರಪ್ಪ ಮರಣ ಹೊಂದಿದ ನಂತರ ದಾವಾ ಸ್ವತ್ತಿನ ಖಾತೆ ಆತನ ಮೊದಲನೆ ಮಗ ಸಿದ್ದಪ್ಪನ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ಸರಿ. ಸಿದ್ದಪ್ಪ ಮರಣಾ ಹೊಂದಿದ ನಂತರ ದಾವಾ ಸ್ವತ್ತಿನ ಖಾತೆ ನಿಮ್ಮ ತಂದೆಯ ಹಸೆರಿಗೆ ವರ್ಗಾವಣೆಯಾಯಿತು ಎಂದು ಸೂಚಿಸಲಾಗಿ ಸಾಕ್ಷಿ ಸಿದ್ದಪ್ಪ ಇದ್ದಾಗಲೆ ವರ್ಗಾವಣೆಯಾಯಿತು ಎಂದು ನುಡಿಯುತ್ತಾರೆ.

3. ಸಿದ್ದಪ್ಪ ತನ್ನ ಭಾಗಕ್ಕೆ ಬಂದ ಹಿಸ್ಸೆಯನ್ನು ಮಿನಾಕ್ಷಿ ವಾಟರ್ ವರ್ಕ್ಸ್ ಗೆ ಮಾರಾಟ ಮಾಡಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ಪರಣ್ಣನ ಭಾಗಕ್ಕೆ ಬಂದ ಜಮೀನನ್ನು ಸರ್ಕಾರ ಖರೀದಿಸಿರುತ್ತದೆಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಸೀರಿಯಲ್ ಸಂಖ್ಯೆ585 ರಲ್ಲಿ ಸಿದ್ದಪ್ಪ ಬಿನ್

ರುದ್ರಯ್ಯ ರವರ ಬಾಬ್ತು ಜಮೀನನ್ನು ಮೀನಾಕ್ಷಿ ವಾಟರ್ ವರ್ಕ್ಸ್ ಮಾರಾಟ ಮಾಡಲಾಗಿದೆ ಎಂದು ಇರುತ್ತದೆಂದು ಸೂಚಿಸಲಾಗಿಸಾಕ್ಷಿ ಅಲ್ಲಿ ಬರೆದಿರ ಬಹುದು ಆದರೆ ಅದು ಪರಣ್ಣನ ಸ್ವತ್ತು ಎಂದು ನುಡಿಯುತ್ತಾರೆ.

4. 20 ಗುಂಟೆ ಜಮೀನನ್ನು ನಿಮ್ಮ ತಂದೆ ಮಲ್ಲಪ್ಪ ಮನೆ ಕಟ್ಟುವ ಸಲುವಾಗಿ ಅಲಿನೇಷನ್ ಮಾಡಿಸಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ಪರಣ್ಣ ಮತ್ತು ನನ್ನ ತಂದೆ ಇಬ್ಬರು ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ಅಲಿನೇಷನ್ ನಲ್ಲಿ ನಿಮಗೆ ಎಷ್ಟು ಗುಂಟೆ ಬಂತು ಎಂದು ಪ್ರಶ್ನಿಸಲಾಗಿ ಸಾಕ್ಷಿ ನಮಗೆ 11 ಗುಂಟೆ ಪರಣ್ಣನಿಗೆ 9 ಗುಂಟೆ ಎಂದು ನುಡಿಯುತ್ತಾರೆ . 11 ಗುಂಟೆ ನಮಗೆ ಬಂದ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮಗೆ ಬಂದ 11 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆಃ ನಮ್ಮದೆ ಜಮೀನು, ಪಶ್ಚಿಮಕೆಃ ಪಿ.ಡಬ್ಲೂ.ಡಿ ರಸ್ತೆ, ಉತ್ತರಕ್ಕೆ ಃಮುತ್ತಾವರ ರೋಡ್ ಮತ್ತು ಕರಿಯಪ್ಪ ರ ಜಮೀನುಃ ದಕ್ಷಿಣಕ್ಕೆಃ ಗಂಗಾಧರಪ್ಪ ನವರ ಅಲಿನೇಷನ್ ಜಾಗ ಇರುತ್ತದೆ.

5. ಪರಣ್ಣನಿಗೆ ಬಂದ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆಃ ಗಂಗಾಧರಪ್ಪನ ಜಮೀನು ಪಶ್ಚಿಮಕೆಃ ಪಿ.ಡಬ್ಲೂ.ಡಿ ರಸ್ತೆ, ಉತ್ತರಕ್ಕೆಃ ನನ್ನದೆ ಜಮೀನು, ದಕ್ಷಿಣಕ್ಕೆಃ ನನ್ನದೆ ಜಮೀನು ಇರುತ್ತದೆ. ಅಲಿಗೇಷನ್ ಆದ 20 ಗುಂಟೆ ಜಾಗ ನಮ್ಮ ತಂದೆ ಮಲ್ಲಪ್ಪನ ಹೆಸರಿನಲ್ಲಿತ್ತು ಎಂದರೆ ಸರಿ. ತಂದೆ ಮರಣಾ ಹೊಂದಿದ ನಂತರ ಆ 20 ಗುಂಟೆ ಜಾಗದ ದಾಖಲೆ ನಿಮ್ಮ ಹೆಸರಿಗೆ ಆಯಿತು ಎಂದು ಸೂಚಿಸಲಾಗಿ ಸಾಕ್ಷಿ ಸುಳ್ಳು ನಮ್ಮ ತಂದೆ ಇದ್ದಾಗಲೆ ನನ್ನ ಮತ್ತು ಗಂಗಾಧರಪ್ಪನ ಹೆಸರಿಗೆ ಆಗಿರುತ್ತದೆಂದು ನುಡಿಯುತ್ತಾರೆ. ಗಂಗಾಧರಪ್ಪನ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ತಾಲ್ಲೂಕು ಕಛೇರಿಯಿಂದ ಈ ಬಗ್ಗೆ ದಾಖಲೆ ಪಡೆದು ಹಾಜರುಪಡಿಸಿರುತ್ತೇನೆ.

6. ಮೃತ ಶಿವರುದ್ರಪ್ಪನಿಗೆ ಬಿಟ್ಟು ಕೊಟ್ಟ 2 ಗುಂಟೆ ಜಮೀನಿನ ಚೆಕ್ಕುಬಂದಿ ಕೇಳಲಾಗಿ ಸಾಕ್ಷಿ ಪಶ್ಚಿಮಕ್ಕೆಃಪಿ .ಡಬ್ಲೂ.ಡಿ ರಸ್ತೆ, ಪೂರ್ವಕ್ಕೆ ಗಂಗಾದರಪ್ಪನ ಜಮೀನು, ಉತ್ತರಕ್ಕೆಃ ಪ್ರಕಾಶನ ಜಮೀನು, ದಕ್ಷಿಣಕ್ಕೆಃ ಮಹೇಶ್ವರಪ್ಪನ ಜಮೀನು ಇರುತ್ತದೆಂದು ನುಡಿಯುತ್ತಾರೆ. ಮೃತ ಶಿವರುದ್ರಪ್ಪನ ಹೆಸರಿನಲ್ಲಿ 2 ಗುಂಟೆ ಜಮೀನಿನಲಿ ಸಂಬಂಧಿಸಿದಂತೆ ಯಾವುದೆ ದಾಖಲೆ ಮತ್ತು ಖಾತೆ ಇಲ್ಲ ಎಂದರೆ ಸರಿಯಲ್ಲ. ಈಗಲೂ ಅಲಿನೇಷನ್ ಆದ 20 ಗುಂಟೆ ಜಾಗ ನಿಮ್ಮ ಹೆಸರಿನಲ್ಲಿಯೆ ದಾಖಲೆ ಇದೆ ಎಂದು ಸೂಚಿಸಲಾ ಗಿಸಾಕ್ಷಿ ಬರಿ 12 ಗುಂಟೆಗೆ ಮಾತ್ರ ಇರುತ್ತದೆಂದು ನುಡಿಯುತ್ತಾರೆ.

7. ಪೂರ್ತಿ 20 ಗುಂಟೆಯನ್ನು ಲಪಟಾಯಿಸುವ ಉದ್ದೇಶದಿಂದ ಗಂಗಾಧರಪ್ಪನ ಹೆಸರಿನಲ್ಲಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕರೆ ಹಂಚಿನ ಮನೆಯನ್ನು ಯಾವಾಗ ಕಟ್ಟಲಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಕೆಂಪು ಹಂಚಿನ ದಕ್ಷಿಣ ದಿಕ್ಕಿಗೆ 20 ಗುಂಟೆ ಜಮೀನು ಬರುತ್ತದೆ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಶಿವಣ್ಣನ ಮನೆ ಇರತ್ತದೆಂದರೆ ಸರಿ. ಶಿವಣ್ಣನ ಮನೆಯ ದಕ್ಷಿಣ ದಿಕ್ಕಿಗೆ ಶಾಂತಪ್ಪನ ಮನೆ ಇರುತ್ತದೆಂದರೆ ಸರಿ. ಶಾಂತಪ್ಪನ ಮನೆಯ ದಕ್ಷಿಣ ದಿಕ್ಕಿಗೆ ಹೊನಪ್ಪನ ಮನೆ ಇರುತ್ತದೆಂದರೆ ಸರಿ. ಹೊನಪ್ಪನ ಮನೆಯ ದಕ್ಷಿಣಕ್ಕೆ ಖಾಲಿ ಸೈಟು ನಂತರ ಡೈರಿ ಇರುತ್ತದೆಂದರೆ ಸರಿ.

8. ಚಂದ್ರಪ್ಪನ ಸೈಟಿನ ಪಕ್ಕ ಗಂಗಾಧರಪ್ಪನಿಗೆ ಎಷ್ಟು ಅಳತೆಯ ನಿವೇಶನ ಇದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ 9 ಗುಂಟೆ ಇದೆ ಎಂದು ನುಡಿಯುತ್ತಾರೆ. ಗಂಗಾಧರಪ್ಪನ ನಿವೇಶನದ ನಂತರ ಮಹೇಶ್ವರಪ್ಪನ ನಿವೇಶನ ಇರುತ್ತದೆ. ಮಹೇಶ್ವರಪ್ಪನ ನಿವೇಶನದ ದಕ್ಷಿಣಕ್ಕೆ ಪ್ರಕಾಶನ ನಿವೇಶನ ಇರುತ್ತದೆ. ಪ್ರಕಾಶನ ನಿವೇಶನದ ದಕ್ಷಿಣಕ್ಕೆ ಮೃತ ಶಿವರುದ್ರಪ್ಪನ ನಿವೇಶನ

ಇರುತ್ತದೆ. ಮೀನಾಕ್ಷಿ ವಾಟಾರ್ ವರ್ಕ್ಸ್ ಗೆ ಮಾರಿದ 2 ಎಕರೆ 36 ಗುಂಟೆ ಮತ್ತು ಅಲಿನೇಷನ್ ಆದಂತಹ 20 ಗುಂಟೆ ಜಮೀನನ್ನು ಬಿಟ್ಟು ಒಟ್ಟು 11 ಎಕರೆ 18 ಗುಂಟೆ ಉಳಿದಿತ್ತು ಎಂದು ಸೂಚಿಸಲಾ ಗಿ ಸಾಕ್ಷಿ ಅಲೀನೇಷನ್ ಆದ 20 ಗುಂಟೆ ಸೇರಿಸಿ 11 ಎಕರೆ 18 ಗುಂಟೆ ಇತ್ತು ಎಂದು ನುಡಿಯುತ್ತಾರೆ.

9. 1970 ರಿಂದ 1975 ರ ವರೆಗೆ ಖರಾಬನ್ನು ಬಿಟ್ಟು 14 ಎಕರೆ 34 ಗುಂಟೆ ಜಮೀನು ನನ್ನ ತಂದೆ ಮಲ್ಲಪ್ಪನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಖರಾಬು ಸೇರಿಸಿ 16 ಎಕರೆ 24 ಗುಂಟೆ ಇತ್ತು ಎಂದು ಸೂಚಿಸಲಾಗಿ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಪರಣ್ಣ 16 ಎಕರೆ 24 ಗುಂಟೆ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಪರಣ್ಣ ಅವರವರ ಭಾಗಕ್ಕೆ ಬಂದಂತಹ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಅವರವರ ಭಾಗಕ್ಕೆ ಬಂದಂತಹ ಜಮೀನನ್ನು ಉಳುಮೆ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 7 ಮತ್ತು 8 ರಂತೆ 1970 ರಿಂದ 1975 ರ ತನಕ ನಮ್ಮ ತಂದೆ ಮತ್ತು ಪರಣ್ಣ ಇಬ್ಬರು ತಲಾ 6 ಎಕರೆ 17 ಗುಂಟೆಯನ್ನು ಅನುಭವಿಸುತ್ತಿದ್ದರು ಎನ್ನುವುದು ಸರಿಯಲ್ಲ.

10. ಪರಣ ಮರಣಾ ಹೊಂದಿದ ನಂತರ ಗಂಗಾಧರಪ್ಪ ನವರ ಹೆಸರಿಗೆ 6 ಎಕರೆ 17 ಗುಂಟೆ ಬದಲಾಗಿ 4 ಎಕರೆ 4 ಗುಂಟೆ ಎಂದು ನೀವು ತಿದ್ದಿಸಿ ಖಾತೆ ಬದಲಾವಣೆ ಮಾಡಿಸಿರುತ್ತೀರಿ ಎಂದು ಸೂಚಿಸಲಾಗಿ ಸಾಕ್ಷಿ 2 ಎಕರೆ 36 ಗುಂಟೆ ಸರ್ಕಾರ ಖರೀದಿಸಿದ್ದು, ಉಳಿದ ಜಾಗ ಖಾತೆ ಬದಲಾವಣೆ ಆಗಿರುತ್ತದೆಂದು ನುಡಿಯುತ್ತಾರೆ. 2 ಎಕರೆ 36 ಗುಂಟೆ ಜಮೀನನ್ನು ಸರ್ಕಾರ 1954 ಮತ್ತು 1955 ರಲ್ಲಿ ವಶ ಪಡಿಸಿಕೊಂಡಿರುತ್ತದೆ ಎನ್ನುವುದು ಸರಿ.

11. ಸರ್ಕಾರ ವಶ ಪಡಿಸಿಕೊಂಡ 2 ಎಕರೆ 36 ಗುಂಟೆ ಜಮೀನನ್ನು 1960-1961 ರಲ್ಲಿ ನಿಪಿ 4 ರಂತೆ ಮೀನಾಕ್ಷಿ ವಾಟಾರ್ ವರ್ಕ್ಸ್ ರವರ ಖಾತೆ ಗೆ ವರ್ಗಾಣೆಯಾಯಿತು ಎಂದರೆ ಸರಿ. ಸದರಿ 2 ಎಕರೆ 36 ಗುಂಟೆ ಬಿಟ್ಟು ಇನ್ನು 11 ಎಕರೆ 18 ಗುಂಟೆ ಉಳಿದಿತ್ತು ಎಂದರೆ ಸರಿ. ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿರುತ್ತಾರೆ**,** ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.